ಸಿಸಿ.ನಂ.1391/2022
ಪಿ ಡಬ್ಲ್ಯೂ-1

ದಿಃ**13.03.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು:- ಆರೋಪಿ ಪರ P.H.T., ವಕೀಲರಿಂದಃ-

ನಾನು ಆರೋಪಿಗೆ 5 ಲಕ್ಷ ರೂಪಾಯಿಗಳನ್ನು ನೀಡಿರುತ್ತೇನೆ . ನಾನು ನಮ್ಮ ಒಟ್ಟು ಕುಟುಂಬದಲ್ಲಿ ವಾಸ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ನಮ್ಮ ತಂದೆ ತಾಯಿ ಯೋಗ ಕ್ಷೇಮವನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ ಎಂದರೆ ಸರಿ. ನಮ್ಮ ತಂದೆ ತಾಯಿಗೆ ಈಗ ಸುಮಾರು 68 ವರ್ಷ ವಯಸ್ಸು ಇರುತ್ತದೆ . ನಮ್ಮ ತಂದೆ ತಾಯಿ ಇಬ್ಬರಿಗೂ ಸರ್ಕಾರದಿಂದ ವೃದ್ಯಾಪ್ಯ ವೇತನ ಬರುತ್ತದೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಪ್ರತಿ ತಿಂಗಳಿಗೆ 20-25 ಸಾವಿರ ಖರ್ಚು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆಸಿ ನಮ್ಮ ತಿಂಗಳ ಖರ್ಚು 5-10 ಸಾವಿರ ಬರುತ್ತದೆ ಎಂದು ಹೇಳುತ್ತಾರೆ . ನಮಗೆ ತಿಂಗಳಿಗೆ ಎಷ್ಟು ಆಧಾಯ ಮತ್ತು ಖರ್ಚು ಇರುತ್ತದೆ ಎಂದು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ . ನಾವು ಒಟ್ಟು ಕುಟುಂಬದಲ್ಲಿ ಇರುವ ಕಾರಣ ನಮ್ಮ ಅಣ್ಣ ತಮ್ಮಂದಿರು ನನಗೆ ಬರುವ 5 ಲಕ್ಷ ಆಧಾಯದಲ್ಲಿ ಪಾಲು ಪಡೆದುಕೊಳ್ಳುವುದಿಲ್ಲ . ಈಗಲೂ ನಮ್ಮ ಕುಟುಂಬದ ನಮ್ಮ ತಂದೆ ಇರುತ್ತಾರೆ

ಎಂದರೆ ಸರಿ. ನಮ್ಮ ತಂದೆ ಆರೋಗ್ಯವಾಗಿ ಇರುತ್ತಾರೆ ಎಂದರೆ ಸರಿ. ನನ್ನ ಖರ್ಚಿಗೆ ನಮ್ಮ ತಂದೆಯನ್ನು ಕೇಳಿ ಪಡೆಯುತ್ತೇನೆ ಎಂದರೆ ಸರಿ. ನನಗೆ 3 ವರ್ಷದ ಒಬ್ಬನೇ ಮಗ . ನಮ್ಮದು ಅವಿಭಕ್ತ ಕುಟುಂಬಕ್ಕೆ ತಿಂಗಳಿಗೆ 20 ರಿಂದ 25 ಸಾವಿರ ಖರ್ಚು ಇರುತ್ತದೆ ಎಂದರೆ ಸರಿಯಲ್ಲ. ನಮಗೆ ಹೊಲ ಜಮೀನು ಬಿಟ್ಟು ಬೇರೆ ಆಧಾಯ ಇರುವುದಿಲ್ಲ ಎಂದರೆ ಸಾಕ್ಷಿ ನಾನು ಸೆಂಟರಿಂಗ್ ಕೆಲಸ ಮಾಡುತ್ತೇನೆ ಎಂದು ಹೇಳುತ್ತಾರೆ . ನಾನು ಸ್ವಂತವಾಗಿ ಸೆಂಟರಿಂಗ್ ಕೆಲಸ ಮಾಡುತ್ತೇನೆ . ನನ್ನ ಬಳಿ ಪರವಾನಗಿ ಮತ್ತು ಲೇಬರ್ ಕಾರ್ಡ್ ಇರುವುದಿಲ್ಲ . ನನಗೆ ತಿಂಗಳಿಗೆ ಸೆಂಟರಿಂಗ್ ಕೆಲಸದಿಂದ ಅಂದಾಜು 25 ಸಾವಿರ ಬರುತ್ತದೆ . ನಮ್ಮ ಸಂಪಾದನೆಯಿಂದ ನಮ್ಮ ಕುಟುಂಬದ ಖರ್ಚು ಸರಿ ಹೋಗುತ್ತದೆ ಎಂದರೆ ಸಾಕ್ಷಿ ತಿಂಗಳಿಗೆ 5 ಸಾವಿರ ಮಾತ್ರ ಖರ್ಚು ಇರುತ್ತದೆ ಎಂದು ಹೇಳುತ್ತಾರೆ . ನಿಪಿ 1 ಚೆಕ್ ಗೆ ಆರೋಪಿ ಸಹಿ ಮಾಡಿರುತ್ತಾರೆ . ಆರೋಪಿಗೆ ಓದಲು ಬರೆಯಲು ಬರುತ್ತದೆ . ಆರೋಪಿಯು ತನ್ನ ಬ್ಯಾಂಕಿನಲ್ಲಿ ಕನ್ನಡ ಭಾಷೆಯಲ್ಲಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ನಿಪಿ 1 ರಲ್ಲಿ ಇರುವ ಹಾಗೆ ಸಹಿ ಮಾಡಿ ನೀಡಿರುತ್ತಾರೆ . ಆರೋಪಿ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಆಂಗ್ಲಭಾಷೆ ಬರೆಯಲು ಒಂದು ಅಕ್ಷರ ಸಹ ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ದಾಖಲೆಯು ಆರೋಪಿಯ ಸಹಿಯ **SIGNATURE DIFFERES** ಎಂದು ವಾಪಸ್ ಆಗಬೇಕಾಗಿತ್ತು ಎಂದರೆ ಸರಿಯಲ್ಲ. ನಮ್ಮ ಊರಿನ ಅಧ್ಯಕ್ಷರು ಮತ್ತು **SBI** ಬ್ಯಾಂಕ್ ಮ್ಯಾನೇಜರ್ ಜಗಳೂರು ಅವರು ಪರಿಚಯ ಇರುವ ಕಾರಣ ನಾನು ನಿಪಿ **2** ಅನ್ನು ಆರೋಪಿ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂದು ತಪ್ಪಾಗಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಸೆಂಟರಿಂಗ್ ಕೆಲಸ ಮಾಡಲು ಕೂಲಿ ಕಾರ್ಮಿಕನಾಗಿ ಅರಿಶಿಣಗುಂಡ ಬಸವರಾಜ್ ಬಳಿ ಹೋಗುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆಸಿ ನನ್ನ ಸ್ವಂತ ಕೆಲಸ ಇರುತ್ತದೆ ಎಂದು ಹೇಳುತ್ತಾರೆ . ಆರೋಪಿಯ ಕಾರಿನ ಡಿಕ್ಕಿಯಲ್ಲಿ ಇರುವ ನಿಪಿ 1 ಚೆಕ್ ಅನ್ನು ನಾನು ತಗೆದುಕೊಂಡು ಈ ಪ್ರಕರಣದಲ್ಲಿ ದುರುಪಯೋಗ ಪಡಿಸಿಕೊಂಡು ಈ ಪಿರ್ಯಾದು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಹಿಂದೆ ಆರೋಪಿ ಪರ ವಕೀಲರು ತಮಗೆ ಆರೋಪಿಗೆ ತಾನು ಎಷ್ಟು ಸಾಲ ನೀಡಿರುವುದಾಗಿ ಕೇಳಿದಾಗ ನಾನು ಒಮ್ಮೆ 4 ಲಕ್ಷ , 5 ಲಕ್ಷ ಹಾಗೂ

ಮತ್ತೊಮ್ಮೆ 6 ಲಕ್ಷ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ನಾನು ಮತ್ತು ಅರಿಶಿಣಗುಂಡಿ ಬಸವರಾಜಪ್ಪ ಸಂಬಂದಿಕರು ಇರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ ಆಂಗ್ಲಭಾಷೆ ಒದಲು ಬರೆಯುವ ಬಗ್ಗೆ ಯಾವುದೇ ದಾಖಲೆ ಸಲ್ಲಿಸಿರುವುದಿಲ್ಲ . ನನಗೆ ಆರೋಪಿಯು ಚಿಕ್ಕೇರನಹಳ್ಳಿ ಗ್ರಾಮ ಮೊಳಕಾಲ್ಮೂರು ಗ್ರಾಮದಲ್ಲಿ ವಾಸವಾಗಿರುವುದು ಗೊತ್ತಿದ್ದರು ಸಹ ನಾನು ಬ್ಯಾಂಕ್ ಕಾಲೋನಿ ಗೋನೂರು ರಸ್ತೆ ಚಿತ್ರದುರ್ಗ ಪಟ್ಟಣ ವಾಸವಾಗಿರುತ್ತೇನೆ ಎಂದುತಪ್ಪಾಗಿ ನಿಪಿ 3 ನೋಟೀಸ್ ಅನ್ನು ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಹಣ ನೀಡಿದಾಗ ನಾನು ಒಬ್ಬನೇ ಇದ್ದೇ . ಆರೋಪಿಗೆ 5 ಲಕ್ಷ ನೀಡಿದೆ ಎಂದು ಹೇಳುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ . ಈ ಪ್ರಕರಣ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯ ಸರಿಯಾದ ವಿಳಾಸ ಗೊತ್ತಿದ್ದರು ಸಹ ಬೇರೇ ವಿಳಾಸಕ್ಕೆ ನಿಪಿ 3 ನೋಟೀಸ್ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ವಿರುದ್ದ ಸುಳ್ಳು ಪಿರ್ಯಾದಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು